ಇಲ್ವಲ್ಲ ನಿಮಗೆ ಹೇಗೂ ಒಂದು ವಿಷಯವಿದೆ ಅನ್ನೋದು. ಈ ಹೆಂಡತಿಯನ್ನು ಗೌರವಿಸೋ ಪಾಠ ನಿಮಗೆ ಆಗೇ ಇಲ್ಲ. ಉಡೋದಕ್ಕೆ ವರ್ಷಕ್ಕೆರಡು ಸೀರೆ ದಯಪಾಲಿಸಿದ್ರೆ, ಹೊಟ್ಟೆಗೆ ಎರಡ್ಹೊತ್ತು ಅನ್ನ ಬಿದ್ರೆ ಗಂಡನ ಜವಾಬ್ದಾರಿ ಮುಗೀತು ಅನ್ನೋಕೆ ನಾವು ಯಾವ ಕಾಲದಲ್ಲಿ ಇದ್ದೇವೆ, ಅಲ್ವೇ? ಇನ್ನು ಸಾಕು, ಆತ್ಮ ಋಣ ಅಂತ ಒಂದಿದೆ. ಅಂದ್ರೆ, ತನಗೆ ತಾನು ಋಣಿಯಾಗಿರೋದು. ಹೀಗೆ ಮನಸ್ಸಿಗೆ ವಿರುದ್ಧವಾಗಿ ಇನ್ನು ಬದುಕೋದೂ ಕೂಡ ದ್ರೋಹ ಮಾಡಿಕೊಂಡಂತೆ. ನಾನು ಸುಖಕ್ಕೆ ಅನರ್ಹಳು ಅಂತ ಯೋಚನೆ ಮಾಡೋದು ತಪ್ಪಂತೆ. ನನ್ನ ಕರ್ತವ್ಯಗಳನ್ನು ಸಂಪೂರ್ಣವಾಗಿ ಮಾಡಿದ್ದೇನೆ. ಮದ್ವೆಯಲ್ಲಿ ವಾಗ್ದಾನ ಮಾಡಿದ್ದ ಅಪ್ಪ ಅಮ್ಮನೂ ಈಗಿಲ್ಲ. ಬಾಕಿ ಉಳಿದ ಜೀವನ ನಾನು ನನ್ನಷ್ಟಕ್ಕೇ ಇರುವವಳು. ಇನ್ನು ಊರಿನವ್ರು, ಅವ್ರು ಇವ್ರು... ಯಾರ ಮಾತೂ ನಂಗೆ ಅಗತ್ಯವಿಲ್ಲ. ಅಪರೂಪಕ್ಕೆ ಜಯಂತ ಇಲ್ಲಿಗೆ ಬಂದಾಗ ಬಂದರೂ ಬಂದು ಹೋದೆನು. ಅದೂ ಬೇಡ ಅಂದ್ರೂ ತೊಂದರೆ ಇಲ್ಲ' ಸತ್ಯನ ಮಾತಿನಲ್ಲಿದ್ದ ದೃಢತೆ ನೋಡಿ ದತ್ತು ಮೇಷ್ಟ್ರು ಅವಾಕ್ಕಾದರು. ಎಲ್ಲಿತ್ತು ಈ ಧೈರ್ಯ ಇವಳಲ್ಲಿ... ಸುಮಂತನೊಂದಿಗೆ ಜಯಂತ ಅಷ್ಟರಲ್ಲಾಗಲೇ ಮಾತಾಡಿ ಸುಮಂತನೂ 'ಆಯಿಗೆ ಹೇಗಿಷ್ಟನೋ ಹಾಗೇ ಇರಲಿ ಅಪ್ಪಯ್ಯ...' ಎಂದು ಮುಖವನ್ನೂ ನೋಡದೆ ಒಳ ಹೋದಾಗ ದತ್ತು ಮೇಷ್ಟ್ರಿಗೆ ಮೊದಲ ಬಾರಿಗೆ ಸೋತ ಅನುಭವ. ದೈನ್ಯದಿಂದ ಸತ್ಯನ ಕಡೆಗೆ ನೋಡಿದರೆ ಅವಳ ಕಣ್ಣಲ್ಲಿ ನಿರ್ಲಿಪ್ತತೆ ಮಡುಗಟ್ಟಿತ್ತು.

★★★

ಕೆಲಸದ ಮಲ್ಲಿಯ ಬಾಯಿಯಿಂದ ಮಂಜಾಡಿಯ ಪ್ರತಿ ಮನೆಯಲ್ಲೂ ಆ ದಿನ ಅದೇ ಸುದ್ದಿ! ಊರಿನ ಗಂಡಸರು, ಬೈರಾಸು ಕೊಡವುತ್ತಾ ಅದುವರೆಗೂ ದತ್ತು ಮೇಷ್ಟ್ರು ಮನೆಯವರು ಎಂದು ಗೌರವಿಸುತ್ತಿದ್ದದ್ದೂ ಮರೆತು ಹೋಗಿ ಆ ಕ್ಷಣದಿಂದ, 'ಅಬ್ಬಾ ಈ ಪುಡಿಹೆಂಗಸಿನ ಅಹಂಕಾರವೇ... ಇವಳಿಗೆ ಗಂಡ ಈಗ 'ಬೇಡವಾಯ್ತು' ಎಂದುಕೊಂಡು ತಂತಮ್ಮ ಹೆಂಡತಿಯರ ಕಡೆಗೆ ಸ್ವಲ್ಪ ಅಂಜಿಕೆ, ಸ್ವಲ್ಪ ಸಂಶಯದಿಂದ ನೋಡುತ್ತಾ ಇವರನ್ನು ಇನ್ನೂ ಸ್ವಲ್ಪ ಹದ್ದುಬಸ್ತಿನಲ್ಲಿಡಬೇಕು ಎಂದುಕೊಂಡರೆ, ಮಂಜಾಡಿಯ ಬಹುತೇಕ ಹೆಂಗಸರು, 'ವಾಹ್, ಸತ್ಯಕ್ಕ! ನಿನ್ನ ಧೈರ್ಯವೇ ಧೈರ್ಯ. ನಾವು ಸಾಯೋತನಕ ಇಲ್ಲೇ ಕೊಳೀಬೇಕೇನೊ. ಹೆತ್ತರೆ ಇಂಥ ಮಗನನ್ನು ಹೆರಬೇಕು' ಎಂದು ಕೈ ಕೈ ಹಿಸುಕುತ್ತಾ ಕರುಬುತ್ತಾ ರಾತ್ರೆ ನಿದ್ರೆ ಇಲ್ಲದೆ ಅತ್ತ ಇತ್ತ ಹೊರಳಾಡಿ ಕಣ್ಣು ಊದಿಸಿಕೊಂಡಿದ್ದರು.

★★★

ಮುಂಜಾನೆ ಕಾರು ಹೊರಟಿತು. ಸತ್ಯ ಮಗನ ಕಾರಿನಲ್ಲಿ ಕೂತು ಹೊರ ನೋಡುತ್ತಿದ್ದರೆ, ಊರು ಹಿಂದಕ್ಕೋಡುತ್ತಿತ್ತು. ಡ್ರೈವ್ ಮಾಡುತ್ತಲೇ ಜಯಂತ ಯಾರಿಗೋ ಫೋನ್ ಮಾಡುತ್ತಾ, 'ನಂಗೊಂದು ಹಾರ್ಮೋನಿಯಂ ಬೇಕು, ಡಬಲ್ ರೀಡ್ಸಿನದು...' ಎಂದೇನೋ ವಿಚಾರಿಸುತ್ತಿದ್ದ. ಸೀಟಿಗೊರಗಿ ಹೊರ ನೋಡಿದ ಸತ್ಯಳಿಗೆ ಬೆಳ್ಳಕ್ಕಿಗಳ ಸಾಲು ಕಾಣಿಸಿತು. ಕ್ಷಣಕ್ಕೊಂದು ವಿನ್ಯಾಸದಲ್ಲಿ ಹಾರುತ್ತಿದ್ದವು. ಮೇಲೆ ಸೂರ್ಯ ಫಳಫಳ ಹೊಳೆಯುತ್ತಿದ್ದ.

**ದೀಪಾ ಫಡ್ಕೆ**

ಹರಿದಾಸ ಸಾಹಿತ್ಯದಲ್ಲಿ ಪಿಎಚ್.ಡಿ. ಪದವಿ ಪಡೆದಿರುವ ದೀಪಾ ಅವರ ಐದು ವ್ಯಕ್ತಿ ಚಿತ್ರಣಗಳ ಪುಸ್ತಕಗಳು ಸೇರಿ ಒಟ್ಟು ಏಳು ಕೃತಿಗಳು ಪ್ರಕಟವಾಗಿವೆ. ಪತ್ರಿಕೆಗಳಿಗೆ ಲೇಖನಗಳನ್ನು ಬರೆದಿದ್ದಾರೆ. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.